<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 28432-2018

ಸಿಡಬ್ಲೂ - 9 ಪಿಡಬ್ಲೂ-2

| | | |
|---|---|---|
| ಸಾಕ್ಷಿದಾರರ ಹೆಸರು | : | ಗಿರಿ ಕೆ. ಸಿ |
| ತಂದೆಯ ಹೆಸರು | : | ಸಿ.ಜಿ ಕೃಷ್ಣಮೂರ್ತಿ |
| ವಯಸ್ಸು | : | 54 ವರ್ಷ |
| ಕೆಲಸ | : | ಡಿ ವೈ ಎಸ್ ಪಿ, ಚೆನ್ನಪಟ್ಟಣ ಉಪವಿಭಾಗ |
| ವಾಸ | : | ಬೆಂಗಳೂರು ದಕ್ಷಿಣ |

<u>ಸಾಕ್ಷಿಯನ್ನು ದಿನಾಂಕಃ 06-08-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು ಜುಲೈ 2017 ರಿಂದ ಜೂನ್ 2019 ರವರೆಗೆ ಸಿಸಿಬಿಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 13-12-2017 ರಂದು ಚಾಸಾ 8 ರವರಿಂದ ಈ ಕೇಸಿನ ಕಡತವನ್ನು ಪಡೆದು ತನಿಖೆಯನ್ನು ಮುಂದುವರಿಸಿರುತ್ತೇನೆ. ದಿ. 20-01-2018 ರಂದು ಚಾಸಾ 1 ರವರಿಂದ ಪ್ರಕರಣಕ್ಕೆ ಸಂಬಂಧಿಸಿದ ಭರತ್ ರೈಸ್ ಮಿಲ್ ಹೆಸರಿನ ಒಂದು ಕ್ರಯದ ಕರಾರು ಪತ್ರ, ಒಂದು ದಿ. 13-10-2016 ಒಂದು ಲೇಟರ್ ಆಫ್ ಅಂಡರ್ ಟೇಕಿಂಗ್ ದಾಖಲೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳು ಜೆರಾಕ್ಸ ಪ್ರತಿಯಾದ ಕಾರಣ ನಿಶಾನೆಯಾಗಿ ಗುರುತಿಸಿರುವುದಿಲ್ಲ.

ದಿ. 01-03-2018 ರಂದು ಚಾಸಾ 4 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಆರೋಪಿ 1, 3 ಮತ್ತು 5 ರವರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದಿರುತ್ತೇನೆ. ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 198/2016 ರ ದೂರು ಮತ್ತು ಪ್ರ ವ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳು ಜೆರಾಕ್ಸ ಪ್ರತಿಯಾದ ಕಾರಣ ನಿಶಾನೆಯಾಗಿ ಗುರುತಿಸಿರುವುದಿಲ್ಲ. ನಂತರ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಗಳ ವಿರುದ್ಧ

ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ. 3 ನ್ನು ನೋಡಿ ಗುರುತಿಸಿರುತ್ತಾರೆ.

**Inspite of direction Accused have not called their advocate for cross examination, hence PW2 cross taken as closed.**

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ